ನಿರ್ಲಕ್ಷಿತ ಜಾತಿಗಳ ಪ್ರತಿಭಾವಂತರನ್ನು ಹೆಕ್ಕಿ ಅವರಿಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ, ಬೋರ್ಡು, ಕಾರ್ಪೊರೇಷನ್ನುಗಳಲ್ಲಿ, ಸಮಿತಿಗಳಲ್ಲಿ, ವಿಧಾನಮಂಡಲದಲ್ಲಿ, ನ್ಯಾಯಾಂಗದಲ್ಲಿ ಅತ್ಯುನ್ನತ ಸ್ಥಾನಗಳನ್ನು ಕಲ್ಪಿಸಿಕೊಡುತ್ತಾ ಹೋದರು.' ಜೊತೆಗೆ, ಪ್ರಬಲ ಜಾತಿಗಳ ರಾಜಕಾರಣದಿಂದಾಗಿ ಪ್ರಾತಿನಿಧ್ಯ ಪಡೆಯಲಾಗದ ಸಣ್ಣಪುಟ್ಟ ಜಾತಿಗಳ ನಾಯಕರನ್ನು ವಿಧಾನ ಪರಿಷತ್ತು, ರಾಜ್ಯಸಭೆಗಳಿಗೆ ಆಯ್ಕೆ ಮಾಡುವ ಮೂಲಕ ಹೊಸ ಬಗೆಯ ರಾಜಕೀಯ ಅವಕಾಶಗಳನ್ನು ತೆರೆದರು. ಈ ಮೇಲ್ಪಂಕ್ತಿಗಳಲ್ಲಿ ಕೆಲವನ್ನಾದರೂ ಮುಂದೆ ಬಂದ ಮುಖ್ಯಮಂತ್ರಿಗಳು ಅನುಸರಿಸಲೇಬೇಕಾದಂಥ ಅನಿವಾರ್ಯತೆಯನ್ನು ಅರಸು ರಾಜಕಾರಣ ಸೃಷ್ಟಿಸಿತು. ಸಾವಿರಾರು ವರ್ಷಗಳಿಂದ ಸ್ಥಗಿತಗೊಂಡಿದ್ದ ಚರಿತ್ರೆಯನ್ನು ಉತ್ತಮ ನಾಯಕನೊಬ್ಬ ಹೇಗೆ ಕದಲಿಸಬಲ್ಲ ಹಾಗೂ ತಬ್ಬಲಿ ಜಾತಿಗಳ ಬದುಕಿನ ಗತಿಯನ್ನು ಬದಲಿಸಬಲ್ಲ ಎಂಬುದಕ್ಕೆ ಅರಸು ಚಿಂತನೆ–ನಡೆ–ರಾಜಕಾರಣಗಳು ಚರಿತ್ರೆಯ ಇತ್ತೀಚಿನ ಸಾಕ್ಷಿಯಾಗಿ ನಮ್ಮ ಕಣ್ಣೆದುರಿಗಿವೆ.

ಅರಸು ರಾಜಕಾರಣದ ಫಲಾನುಭವಿಗಳಾಗಿಯೂ ಅರಸರಿಗೆ ಕೈಕೊಟ್ಟ ಹಿಂದುಳಿದ ವರ್ಗಗಳ ನಾಯಕರು ಮುಂದೆ ಅರಸು ಕೊಡುಗೆಗಳ ಮಹತ್ವವನ್ನು ನೆನೆದದ್ದಿದೆ. ಆದರೆ, ಹಿಂದುಳಿದ ವರ್ಗಗಳ ನಾಯಕರಿಗೆ ಹಾಗೂ ಹಿಂದುಳಿದ ವರ್ಗಗಳ ಜನರಿಗೆ ತಾತ್ವಿಕ ಸ್ಪಷ್ಟತೆ ಹಾಗೂ ರಾಜಕೀಯ ಗಟ್ಟಿತನ ಇಲ್ಲದಿದ್ದರಿಂದಾಗಿ ಹಿಂದುಳಿದ ವರ್ಗಗಳ ರಾಜಕೀಯ ಮುನ್ನಡೆಗೆ ಅಡ್ಡಿಗಳು ಎದುರಾದವು. ಎಂಬತ್ತರ ದಶಕದಲ್ಲಿ ಇಂಡಿಯಾದ ಹಲವು ಭಾಗಗಳ ದಲಿತ ಸಮುದಾಯಗಳು ಕಾನ್ಷೀರಾಂ–ಮಾಯಾವತಿಯವರ ರಾಜಕಾರಣದ ಗಟ್ಟಿ ಬೆಂಬಲಿಗರಾದಂತೆ ಹಿಂದುಳಿದ ಜಾತಿಗಳು ಅರಸು ಮಾರ್ಗದ ರಾಜಕಾರಣದ ಬೆಂಬಲಿಗರಾಗಿ, ವಾರಸುದಾರರಾಗಿ ಉಳಿಯಲಿಲ್ಲ. ಅರಸು ಅವರ ಅಚಲ ಬೆಂಬಲದಿಂದಾಗಿ ಹಿಂದುಳಿದ ವರ್ಗಗಳ ನಿರ್ಣಾಯಕ ಚಲನೆಗೆ ಕಾರಣವಾದ ಕ್ರಾಂತಿಕಾರಕ ವರದಿ ಕೊಟ್ಟ ಎಲ್.ಜಿ. ಹಾವನೂರರೇ ಖಚಿತ ತಾತ್ವಿಕತೆಯಿಲ್ಲದೆ ಬಿಜೆಪಿಗೆ ಹಾರಿದರೆಂದ ಮೇಲೆ ಇನ್ನಿತರ ಹಿಂದುಳಿದ ಸಮುದಾಯಗಳ ನಾಯಕರ, ಮತದಾರರ ಪತನವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಲ್ಲ.

ಅಸಲಿ ಸಾಮಾಜಿಕ ಕಾಳಜಿಯಿಂದಲೂ, ತಮ್ಮ ರಾಜಕೀಯ ಉಳಿವಿನ ಕಾರಣಕ್ಕಾಗಿಯೂ ಹಿಂದುಳಿದ ಜಾತಿಗಳಿಂದ ಬಂದ ನೂರಾರು ನಾಯಕರನ್ನು ರೂಪಿಸಿದ ಅರಸು ಮುಂದೊಮ್ಮೆ 'ಹಿಂದುಳಿದ ವರ್ಗ' ಎಂಬುದನ್ನು ರೂಪಿಸಲು ತಮಗೆ ಪೂರ್ವಸಿದ್ಧತೆ ಇರಲಿಲ್ಲವೆಂಬುದನ್ನು ಕಂಡುಕೊಂಡರು ಎಂದು ಡಿ.ವಿ. ರಾಜಶೇಖರ್ ಗುರುತಿಸುತ್ತಾರೆ. ಆದರೆ, ಈ ಮಿತಿ ಅರಸು ಒಬ್ಬರದೇ ಎಂದೇನೂ ತಿಳಿಯಬೇಕಾಗಿಲ್ಲ. ಅರಸು ಆರಂಭಿಸಿದ ರಾಜಕಾರಣಕ್ಕೆ ವಿಶಾಲ ತಾತ್ವಿಕ ಚೌಕಟ್ಟನ್ನು ನಿರ್ಮಾಣ ಮಾಡಬೇಕಾಗಿದ್ದವರು ಹಾಗೂ ಇವತ್ತಿಗೂ ಆ ಕೆಲಸ ಮಾಡಬೇಕಾಗಿರುವವರು ಈ ವರ್ಗಗಳಿಗೆ ಸೇರಿದ ಹಾಗೂ ಈ ವರ್ಗಗಳ ಬಗ್ಗೆ ಕಾಳಜಿ, ಜವಾಬ್ದಾರಿಗಳನ್ನುಳ್ಳ ರಾಜಕಾರಣಿಗಳು, ಪತ್ರಕರ್ತರು, ಚಿಂತಕ, ಚಿಂತಕಿಯರು. ತಂತಮ್ಮ ವಲಯಗಳಲ್ಲಿ ಈ ಹೊಣೆಯನ್ನು ನಿರ್ವಹಿಸುತ್ತಾ ಬಂದಿರುವ ಕಲ್ಲೆ ಶಿವೋತ್ತಮರಾವ್, ರವಿವರ್ಮಕುಮಾರ್, ಎಂ.ಸಿ. ನಾಣಯ್ಯ, ನಂಜರಾಜೇ ಅರಸ್, ಬಿ.ಎ. ಮೊಹಿದೀನ್, ಅಗ್ರಹಾರ ಕೃಷ್ಣಮೂರ್ತಿ, ಕಾಗೋಡು ತಿಮ್ಮಪ್ಪ ಮೊದಲಾದವರು ಅರಸು ಜಾರಿಗೊಳಿಸಿದ ಯೋಜನೆಗಳಿಂದ ಹಿಂದುಳಿದ ವರ್ಗಗಳಲ್ಲಿ ಉಂಟಾದ ಮಹತ್ತರ ಬದಲಾವಣೆಗಳನ್ನು ಇಲ್ಲಿ ಚರ್ಚಿಸಿದ್ದಾರೆ. ಅರಸು ತಮ್ಮ ಹದಿಹರೆಯದಲ್ಲಿ ಅರಿಯಲೆತ್ನಿಸಿದ್ದ ಕಾರ್ಲ್ ಮಾರ್ಕ್ಸ್ ವರ್ಗಸಂಘರ್ಷ, ನಂತರ ಅಂಬೇಡ್ಕರ್, ಲೋಹಿಯಾ ಮೂಲಕ ಅರಿತ ಕೆಳಜಾತಿಗಳ ಚಲನೆ ಇವೆಲ್ಲವನ್ನೂ ಬೆರೆಸಿ ಮಾಡಿದ ರಾಜಕಾರಣದ ಉತ್ತಮ ಫಲವನ್ನು ಇವತ್ತಿಗೂ ಅನುಭವಿಸುತ್ತಿರುವ ಲಕ್ಷಾಂತರ ಜನರಿದ್ದಾರೆ. ಈ ಪುಸ್ತಕದಲ್ಲಿ ಅಂಥ ಫಲಾನುಭವಿ ಸಮುದಾಯಗಳ